## ಜಗದಂಬಿಕೆಗೊಂದು ನುಡಿ ನಮನ

ಪರಮಾತ್ಮ ಸಕಲವನ್ನೂ ತನ್ನ ಉದರದಲ್ಲಿ ಸೇರಿಸಿದ ಕಾಲ, ಪ್ರಳಯದ ಕಾಲ. ಆಗ ಆ ಸ್ವಾಮಿಯ ಜೊತೆ ಇರುವ ಏಕೈಕ ಚೇತನ ಅದು ಅವನ ನಲ್ಮೆಯ ಮಡದಿ ಮಹಾಲಕ್ಷ್ಮೀದೇವಿಯರು ಮಾತ್ರ.

ಆಗ ನೀರು ಎನ್ನುವ ವಸ್ತು ಇರುವದಿಲ್ಲ. ಮಹಾಲಕ್ಷ್ಮೀದೇವಿ ತಾವೇ ನೀರಾಗಿ ಸಮಗ್ರ ಬ್ರಹ್ಮಾಂಡವನ್ನೂ ಬ್ರಹ್ಮಾಂಡದ ಆಚೆಯಿರುವ ಆವರಣಗಳನ್ನೂ ವ್ಯಾಪಿಸಿ ನಿಲ್ಲುತ್ತಾರೆ.

ಆಗ ಕತ್ತಲೆ ಎನ್ನುವ ವಸ್ತು ಇರುವದಿಲ್ಲ. ಸ್ವಯಂ ಮಹಾಲಕ್ಷ್ಮೀದೇವಿ ದುರ್ಗಾರೂಪದಿಂದ ಕತ್ತಲೆಯಾಗಿ ದೇವರನ್ನು ಆಚ್ಛಾದಿಸುತ್ತಾರೆ.

ಆಗ ಪರಮಾತ್ಮನಿಗೆ ಹಾಸಿಗೆಯಾಗಿ ಶೇಷ ಇರುವದಿಲ್ಲ. ಶೇಷದೇವರೂ ಮುಕ್ತರಾಗಿ

ಪರಮಾತ್ಮನ ಉದರವನ್ನು ಸೇರಿದ್ದಾರೆ.  ಸ್ವಯಂ ಮಹಾಲಕ್ಷ್ಮೀದೇವಿ ಶ್ರೀರೂಪದಿಂದ ಆಲದ ಎಲೆಯ ರೂಪ ತೆಗೆದುಕೊಂಡು ಪರಮಾತ್ಮನಿಗೆ ಹಾಸಿಗೆಯಾಗುತ್ತಾರೆ. ಪರಮಾತ್ಮನ ಪೂರ್ಣಾಂಗ ಆಲಿಂಗನವನ್ನು ಹೊಂದಿ ಅನಂತ ಸುಖವನ್ನು ಅನುಭವಿಸುತ್ತಾರೆ.

ಪ್ರಳಯಕಾಲದ ಅವಧಿ ಬ್ರಹ್ಮದೇವರ ಲೆಕ್ಕದಲ್ಲಿ ನೂರು ವರ್ಷಗಳು. ಅದರಲ್ಲಿ ಎಂಭತ್ತೇಳುವರೆ ವರ್ಷಗಳು ಕಳೆಯುತ್ತಿದ್ದಂತೆ ಮಹಾಲಕ್ಷ್ಮೀದೇವಿ ಪರಮಾತ್ಮನನ್ನು ಯೋಗನಿದ್ರೆಯಿಂದ ಎಬ್ಬಿಸಲು ತೊಡಗುತ್ತಾರೆ.

ನಾವೆಲ್ಲರೂ ಆ ತಾಯಿಯ ಪ್ರೀತಿಯ ಕಂದಮ್ಮಗಳು. ಪರಮಾತ್ಮನ ಉದರದಲ್ಲಿದ್ದೇವೆ. ನಾವು ಸಂಸಾರವನ್ನು ಕಳೆದುಕೊಂಡು ಮುಕ್ತಿಯನ್ನು ಪಡೆಯಬೇಕು. ಮುಕ್ತಿ ಪಡೆಯಬೇಕಾದರೆ ಪರಮಾತ್ಮನನ್ನು ಹೃದಯಕಮಲದಲ್ಲಿ ಕಾಣಬೇಕು. ಅದಾಗ ಬೇಕಾದರೆ ನಾವು ಪಾಪಗಳನ್ನು ಕಳೆದುಕೊಳ್ಳಬೇಕು. ಪಾಪ

ಕಳೆದುಕೊಳ್ಳಬೇಕಾದರೆ ಶಾಸ್ತ್ರೋಕ್ತ ಕರ್ಮಗಳಿಂದ ಪರಮಾತ್ಮನನ್ನು ಮೆಚ್ಚಿಸಬೇಕು. ಶಾಸ್ತ್ರಗಳಿಂದ ಪರಮಾತ್ಮನನ್ನು ತಿಳಿಯಬೇಕು. ಶಾಸ್ತ್ರವನ್ನು ಓದಬೇಕೆಂದರೆ ದೇಹ ಬೇಕು. ದೇಹ ಬೇಕೆಂದರೆ ನಾವು ಹುಟ್ಟಿಬರಬೇಕು. ಹುಟ್ಟಬೇಕೆಂದರೆ ಭೂಮಿ ನೀರು ಬೆಂಕಿ ಗಾಳಿ ಆಕಾಶಗಳು ಬೇಕು. ಅವು ಬೇಕೆಂದರೆ ಬ್ರಹ್ಮಾಂಡ ಸೃಷ್ಟಿಯಾಗಬೇಕು. ಬ್ರಹ್ಮಾಂಡಸೃಷ್ಟಿಯಾಗಬೇಕಾದರೆ ತತ್ವಗಳ ಸೃಷ್ಟಿಯಾಗಬೇಕು. ಆ ಸೃಷ್ಟಿಯನ್ನು ಮಾಡೇಳು ಸ್ವಾಮಿ ಎಂದು ನಮ್ಮ ತಾಯಿ ನಮಗಾಗಿ ಪ್ರಾರ್ಥನೆ ಮಾಡುತ್ತಾರೆ.

**ನಮಗಾಗಿ ಯಾರೂ ಇಲ್ಲದ ಕಾಲದಲ್ಲಿ, ನಮ್ಮ ಮೇಲಿನ ಅನಂತ ಕಾರುಣ್ಯದಿಂದ ಪರಮಾತ್ಮನನ್ನು ಪ್ರಾರ್ಥನೆ ಮಾಡಿದ ಆ ತಾಯಿಯ ಋಣವನ್ನು ತೀರಿಸಲು ಸಾಧ್ಯವೇ ಇಲ್ಲ. ಆ ಜಗದಂಬಿಕೆಯ ಆ ಕಾರುಣ್ಯಕ್ಕೆ ಎಣೆಯೇ ಇಲ್ಲ.**

ಕಾರಣ, ಪರಮಾತ್ಮನಿಗೆ ಈ ಸೃಷ್ಟಿಯಿಂದ ಏನಾಗಬೇಕಾಗಿದೆ. ಅವನು ನಿತ್ಯತೃಪ್ತ. ಅವನಿಗೆ ಯಾವ ಪ್ರಯೋಜನವೂ ಇಲ್ಲ. ಆ ಜಗದೀಶ

ಜಗದಂಬೆಯರು ಕೇವಲ ನಮ್ಮ ಮೇಲಿನ ಕಾರುಣ್ಯದಿಂದ ಸೃಷ್ಟಿಯನ್ನು ಮಾಡಿ, ನಮ್ಮಿಂದ ಸಾಧನೆಯನ್ನು ಮಾಡಿಸಿ ನಮ್ಮನ್ನು ಮುಕ್ತರನ್ನಾಗಿ ಮಾಡುತ್ತಾರೆ. ಆ ಪರಮಾತ್ಮನ ಕಾರುಣ್ಯವನ್ನು ಅರಿತ ಲಕ್ಷ್ಮೀದೇವಿ ಪ್ರಾರ್ಥನೆ ಮಾಡುತ್ತಾರೆ — ಏಳು ಸ್ವಾಮಿ, ಸೃಷ್ಟಿ ಮಾಡೇಳು, ಎಂದು.

ಪರಮಾತ್ಮ ಪತ್ನಿಯ ಪ್ರೀತಿಯ ಕರೆಗೆ ಓಗೊಟ್ಟ. ಸೃಷ್ಟಿಗಾಗಿ ಸಜ್ಜಾದ. ನಾರಾಯಣ ಮಕ್ತಿಯನ್ನು ಅನುಗ್ರಹಿಸಲು ವಾಸುದೇವರೂಪವನ್ನು ತೊಟ್ಟ, ಲಕ್ಷ್ಮೀದೇವಿ ಮಾಯಾದೇವಿಯಾದರು.

ಒಡೆಯ ಸಂಕರ್ಷಣನಾದ
ಒಡತಿ ಜಯಾದೇವಿಯಾದರು.

ಅಪ್ಪ ಪ್ರದ್ಯುಮ್ನನಾದ,
ಅಮ್ಮ ಕೃತಿಯಾದರು.

ಆ ಲಕ್ಷ್ಮೀಶ ಅನಿರುದ್ಧನಾದ,
ಆ ಲಕ್ಷ್ಮಿದೇವಿ ಶಾಂತಿಯಾದರು.

ಜಗದೊಡೆಯ ರಾಮನಾದ,
ಜಗದೊಡತಿ ಸೀತೆಯಾದರು.

ಭಗವಂತ ಕೃಷ್ಣನಾದ,
ಭಗವತಿ ರುಗ್ಮಿಣೀ ಸತ್ಯಭಾಮೆಯಾದರು.

ಪರಮಾತ್ಮ ಅನಂತರೂಪಗಳನ್ನು ಸ್ವೀಕರಿಸಿದ ಲಕ್ಷ್ಮೀದೇವಿ ಅನಂತರೂಪಗಳಿಂದ ಅವನ ಮಡದಿಯಾದರು.

ಬೆಳ್ಳನೆಯ ಶ್ರೀರೂಪದಿಂದ ಸತ್ವಗುಣವನ್ನು,
ಕೆಂಪನೆಯ ಭೂರೂಪದಿಂದ ರಜೋಗುಣವನ್ನು,
ಕಪ್ಪನೆಯ ದುರ್ಗಾರೂಪದಿಂದ ತಮೋಗುಣವನ್ನು
ನಿಯಮನ ಮಾಡುವ ದೇವತೆ ಮಹಾಲಕ್ಷ್ಮೀದೇವಿ.

ಆ ಲಕ್ಷ್ಮೀ ನಾರಾಯಣರು, ಮಹತ್ ತತ್ವವನ್ನು ಅದನ್ನು ನಿಯಮನ ಮಾಡುವ ಬ್ರಹ್ಮ ವಾಯುಗಳನ್ನು, ಬುದ್ಧಿತತ್ವವನ್ನು ಆ ತತ್ವವನ್ನು ನಿಯಮನ ಮಾಡುವ ಸರಸ್ವತೀ ಭಾರತಿಯರನ್ನು, ಅಹಂಕಾರತತ್ವವನ್ನು ಅದನ್ನು ನಿಯಮನ ಮಾಡುವ ಪಾರ್ವತೀಪತಿ ರುದ್ರದೇವರನ್ನು ಸೃಷ್ಟಿ ಮಾಡಿದರು.

ಆ ನಂತರ, ಹನ್ನೊಂದು ಇಂದ್ರಿಯಗಳನ್ನು, ಪಂಚತನ್ಮಾತ್ರೆಗಳನ್ನು, ಪಂಚಭೂತಗಳನ್ನು ಸೃಷ್ಟಿ ಮಾಡಿದ ಬಳಿಕ ಮಹಾಲಕ್ಷ್ಮೀದೇವಿ ಪರಮಾತ್ಮನಿಂದ ಗರ್ಭವನ್ನು ಧರಿಸಿದಳು. ಲಕ್ಷ್ಮೀನಾರಾಯಣರದು ಅಪ್ರಾಕೃತ ಶರೀರ. ಅವರಿಗೆ ದುಃಖಶ್ರಮಗಳ ಸಂಪರ್ಕವೇ ಇಲ್ಲ. ಸಮಗ್ರ ಬ್ರಹ್ಮಾಂಡವನ್ನು ಒಂದು ಸಾವಿರ ವರ್ಷ ಹೊಟ್ಟೆಯಲ್ಲಿ ಧರಿಸಿ ಲಕ್ಷ್ಮೀದೇವಿ ಸೃಷ್ಟಿಯಾದ ನೀರಿನಲ್ಲಿ ಬ್ರಹ್ಮಾಂಡವನ್ನು ಹಡೆದರು

ಆ ಬ್ರಹ್ಮಾಂಡವನ್ನು ಕೂರ್ಮನಾಗಿ ಪರಮಾತ್ಮ ಬೆನ್ನ ಮೇಲೆ ಹೊತ್ತು ನಿಂತ. ಆ ಕೂರ್ಮನನ್ನು ಆಧಾರಶಕ್ತಿಯಾಗಿ ಲಕ್ಷ್ಮೀದೇವಿ ಹೊತ್ತು ನಿಂತರು. ಆ ಆಧಾರಶಕ್ತಿಯನ್ನು ಪರಮಾತ್ಮ ಅಕ್ಷರಪುರುಷನಾಗಿ ಹೊತ್ತುನಿಂತ.

ಬ್ರಹ್ಮಾಂಡದ ಒಳಗೆ ಪರಮಾತ್ಮ ನಾಭಿಯಲ್ಲಿ ಪದ್ಮವನ್ನು ಸೃಷ್ಟಿಸಿದ. ಲಕ್ಷ್ಮೀದೇವಿ ಪದ್ಮದಲ್ಲೆಲ್ಲ ವ್ಯಾಪಿಸಿ ನಿಂತರು. ಪದ್ಮದಲ್ಲಿ ಬ್ರಹ್ಮದೇವರು ಹುಟ್ಟಿ

ಬಂದರು. ಅವರಿಂದ ಪರಮಾತ್ಮ ಮುಂದಿನ ಸೃಷ್ಟಿ ಮಾಡಿಸಿದ.

ಶ್ವೇತದ್ವೀಪ, ಅನಂತಾಸನ, ವೈಕುಂಠಗಳ ರೂಪದಲ್ಲಿ ಮಹಾಲಕ್ಷ್ಮೀದೇವಿ ಲೋಕಾತ್ಮಿಕೆಯಾಗಿ ಅಭಿವ್ಯಕ್ತಳಾದರು. ಪರಮಾತ್ಮ ಆ ಲೋಕಗಳ ನಾಥನಾಗಿ ತಾನೂ ಪ್ರಕಟನಾದ.

ಲಕ್ಷ್ಮೀದೇವಿ ಮನೆಯಾದರು.
ನಾರಾಯಣ ಮನೆಯೊಡೆಯನಾದ.

ಲಕ್ಷ್ಮೀದೇವಿ ಸಿಂಹಾಸನವಾದರು.
ನಾರಾಯಣ ಅದರಲ್ಲಿ ಆರೂಢನಾದ.

ಆ ಸೌಭಾಗ್ಯ ದೇವತೆ ಆಭರಣಗಳ ರೂಪ ತೊಟ್ಟಳು. ಪರಮಾತ್ಮ ಆ ಆಭರಣಗಳನ್ನು ತೊಟ್ಟ.

ಆ ವೀರಲಕ್ಷ್ಮಿ ಆಯುಧಗಳಾಗಿ ನಿಂತರು. ಪರಮಾತ್ಮ ಅವುಗಳನ್ನು ಹಿಡಿದು ದುಷ್ಟರ ನಿಗ್ರಹಕ್ಕೆ ಸಜ್ಜಾದ.

ಲಕ್ಷ್ಮೀದೇವಿಯರೇ ಅವನ ಪೀತಾಂಬರ.

ಲಕ್ಷ್ಮೀದೇವಿಯರೇ ಅವನ ಹಾವುಗೆ.
ಲಕ್ಷ್ಮೀದೇವಿಯರೇ ಅವನ ಹಾರ.
ಲಕ್ಷ್ಮೀದೇವಿಯರೇ  ಅವನ ಕಿರೀಟ.

ಸಕಲ ರೀತಿಯ ಪೂಜಾ ಸಾಮಗ್ರಿಗಳ ರೂಪದಲ್ಲಿ ಮಹಾಲಕ್ಷ್ಮಿದೇವಿ ಪ್ರಕಟರಾದರು. ಪರಮಾತ್ಮ ಪ್ರೀತಿಯಿಂದ ಪೂಜೆ ಸ್ವೀಕರಿಸಲು ಸಿದ್ಧನಾದ.

ತುಳಸಿಯೂ ಲಕ್ಷ್ಮಿಯೇ. ಕಲಶವೂ ಲಕ್ಷ್ಮಿಯೇ. ಕಲಶೊದಳಗಣ ಅಭಿಷೇಕದ ನೀರೂ ಲಕ್ಷ್ಮಿಯೇ. ಸ್ನಾನದ ಪೀಠವೂ ಲಕ್ಷ್ಮಿಯೇ. ಸ್ನಾನ ಮಾಡಿಸುವ ಅರ್ಚಕರೂಪದಲ್ಲಿಯೂ ತಾಯಿ ಲಕ್ಷ್ಮಿಯೇ.

ಶ್ರೀ ಭೂ ಎಂಬ ಎರಡು ರೂಪದಿಂದ ತಾನೇ ಪರಮಾತ್ಮನೊಡನೆ ಕುಳಿತಿದ್ದಾರೆ. ಲಕ್ಷ್ಮೀ ಎಂಬ ಮತ್ತೊಂದು ರೂಪದಿಂದ ತಾನೇ ಪೂಜೆ ಮಾಡತ್ತಿದ್ದಾರೆ. ಸಕಲ ಪೂಜಾ ಸಾಮಗ್ರಿಗಳ ರೂಪದಲ್ಲಿಯೂ ತಾವೇ ಇದ್ದಾರೆ. ಹೀಗೆ ಸರ್ವವೂ ತಾನಾಗಿ ತನ್ನ ಸರ್ವಸ್ವದ ಆ ನಾಥನನ್ನು ಪೂಜೆ ಮಾಡುತ್ತಾರೆ ಮಹಾಲಕ್ಷ್ಮೀದೇವಿಯರು.

ಜಗತ್ತಿನ ಸಕಲ ಸತ್ಸಂಪತ್ತೂ ಆ ಅಮ್ಮನವರು ನೀಡಿದ್ದು.   ಸೂರ್ಯನಲ್ಲಿ ನಿಂತು ಬೆಳಕು ನೀಡುತ್ತಾರೆ.  ಚಂದ್ರನಲ್ಲಿ ನಿಂತು ಬೆಳಗುತ್ತಾರೆ. ನಕ್ಷತ್ರಗಳಲ್ಲಿ ನಿಂತು ಹೊಳೆಯುತ್ತಾರೆ.  ನದಿಗಳು ಹರಿಯುವದು ಆ ತಾಯಿಯ ಅನುಗ್ರಹದಿಂದ. ಸಮುದ್ರದ ವೈಶಾಲ್ಯ ಗಾಂಭೀರ್ಯಗಳು ಅವರಧೀನ. ನದಿಯ ನೀರು ಸಮುದ್ರವನ್ನು ಸೇರಿ ಮೋಡವಾಗುತ್ತದೆ, ಲಕ್ಷ್ಮೀದೇವಿಯ ಅನುಗ್ರಹದಿಂದ. ಮೇಘವಾಗಿ ಮಳೆ ಸುರಿಯುತ್ತದೆ, ಲಕ್ಷ್ಮೀದೇವಿಯ ಕೃಪೆಯಿಂದ. ಬಿದ್ದ ಮಳೆ ಬೆಳೆಯನ್ನು ಬೆಳೆಸುತ್ತದೆ ಲಕ್ಷ್ಮೀದೇವಿಯ ಅನುಗ್ರಹದಿಂದ. ರೈತನಲ್ಲಿ ನಿಂತು ಶಕ್ತಿಯಾಗಿ ದುಡಿಯುತ್ತಾರೆ. ಸಸ್ಯದಲ್ಲಿ ನಿಂತು ಅದನ್ನು ಬೆಳೆಸುತ್ತಾರೆ. ಮನುಷ್ಯನಲ್ಲಿ ನಿಂತು ಉಣ್ಣುತ್ತಾರೆ. ಉಂಡ ಪದಾರ್ಥವನ್ನು ಪಚನ ಮಾಡಿಸುತ್ತಾರೆ. ಕಣ್ಣಿನ ನೋಡುವ ಶಕ್ತಿ,  ಕಿವಿಯ ಕೇಳುವ ಶಕ್ತಿ, ಮೂಗಿನ ಶಕ್ತಿ, ಎಲ್ಲ ಇಂದ್ರಿಯಗಳ ಎಲ್ಲ ಶಕ್ತಿಗಳೂ ಆ ಮಹಾಲಕ್ಷ್ಮಿಯ ಅಧೀನ.

ನಮ್ಮ ಮಾತು ಆ ತಾಯಿಯಧೀನ. ನಮ್ಮ ಮನಸ್ಸು ಅವರಧೀನ. ನಮ್ಮ ಬುದ್ಧಿ ಅವರಧೀನ. ನಾವು —

ಅರ್ಥಾತ್ ನಮ್ಮ ಜೀವ — ಅವರಧೀನ.

**ಜೀವಭೂತಾಂ ಮಹಾಬಾಹೋ**... ಸಕಲ ಜೀವರ ಪ್ರಾಣಧಾರಣೆ ಮಾಡುವ ಮುಖ್ಯಪ್ರಾಣದೇವರ ಪ್ರಾಣವನ್ನೂ ನಿಯಮಿಸುವ ನಿಜವಾದ ಪ್ರಾಣದೇವತೆ ಮಹಾಲಕ್ಷ್ಮೀದೇವಿ.

ಆ ಲಕ್ಷ್ಮೀದೇವಿಯಿದ್ದಲ್ಲಿ ಸೌಭಾಗ್ಯ. ಅವರಿದ್ದಲ್ಲಿ ಸಂಪತ್ತು. ಸಜ್ಜನಿಕೆಯಿದ್ದಲ್ಲಿ ಅವರು. **ಅಮಂತವಃ ಉಪಕ್ಷಿಯಂತಿ.** ಅಮಂತು ಎಂದರೆ ಅಪರಾಧ ಮಾಡಿ ಗೊತ್ತಿಲ್ಲದವನು, ಅರ್ಥಾತ್ ಪಾಪ ಮಾಡದ ಸಜ್ಜನರಲ್ಲಿ ಆ ಲಕ್ಷ್ಮೀದೇವಿಯ ವಾಸ.

ಮಗು ಮೈ ಹೊಲಸು ಮಾಡಿಕೊಳ್ಳುತ್ತದೆ. ತಾಯಿ ವಾಕರಿಸಿಕೊಳ್ಳುವದಿಲ್ಲ. ಪ್ರೀತಿಯಿಂದ ಎತ್ತಿಕೊಂಡು ಮೈಮಲವನ್ನು ದೂರ ಮಾಡಿ, ಅಲಂಕರಿಸುತ್ತಾಳೆ. ಹಾಗೆಯೇ ಜಗದಂಬಿಕೆಯಾದ ಲಕ್ಷ್ಮೀದೇವಿ ಸಹಿತ. ನಮ್ಮ ದೋಷಗಳನ್ನು ಕಂಡು ಬೇಸರಿಸದೇ ನಮ್ಮನ್ನು ಹತ್ತಿರ ಕರೆದು ನಮ್ಮನ್ನು ಶುದ್ಧಗೊಳಿಸುತ್ತಾರೆ.

ಮನೆಗೆ ವರ ನೀಡಲು ಬಂದಿರುವ ಆ ವರಮಹಾ-ಲಕ್ಷ್ಮಿಯನ್ನು ಭಕ್ತಿಯಿಂದ ಪ್ರಾರ್ಥಿಸೋಣ —

**ಅಮ್ಮಾ ನಿಮ್ಮಯ ಚರಣಪಂಕಜ**
**ಎಮ್ಮ ಹೃದಯದೊಳಿರಲಿ ಸಂತತ**
**ನಿರ್ಮಲಾತ್ಮಕ ವಾಸುದೇವನ ತೋರು ಎಮಗಿನ್ನು ।**
**ಕರ್ಮಪಾಶದಿ ಬದ್ಧನಾಗಿs**
**ಸುಮ್ಮಸುಮ್ಮನೆ ತಿರುಗು ಬಳಲುವೆ**
**ಅಮ್ಮಾ ಎಂದುಸುರುವೆನು ದೈನ್ಯದಿ ಪೊರೆಯೆ ಕರುಣಾಳು ॥**

ಅಮ್ಮಾ ಸಂಸಾರದ ಕೊಳೆಯನ್ನು ಮೆತ್ತಿಕೊಂಡಿದ್ದೇವೆ.
ಪಾಪಗಳ ಕೊಂಪೆಯಾಗಿದ್ದೇವೆ, ತಾಯಿ, ನಮ್ಮ ಪಾಪಗಳನ್ನು ಪರಿಹರಿಸು.

ನಿಮ್ಮ ಪಾದಪದ್ಮಗಳ ನೆನಹು ಸದಾ ನಮ್ಮ ಹೃದಯದಲ್ಲಿರಲಿ ಕರ್ಮದ ಬಂಧನದಿಂದ ನಮ್ಮನ್ನು ದೂರಾಗಿಸಮ್ಮ.

ನಮ್ಮನ್ನು ನಮ್ಮಪ್ಪನ ಬಳಿಗೆ ಸೇರಿಸಮ್ಮ.

ಅಮ್ಮಾ… ಸಂಸಾರದ ಭಯದಿಂದ ನಮ್ಮನ್ನು ಕಾಪಾಡು.

**ತಾಯೆ ನೀನೊಲಿದು ನೆಲೆಸಿರೆ**
**ಮಾಯವಾಗ್ವದು ದುಃಖಸಂತತಿ**
**ಕಾಯ ಕರಣ ಮಡದಿ ಸುತರೊಳು ನೆಲೆಸು ನೀ ಸತತ ।**
**ರಾಯ ರಾಘವನೊಡತಿ ನಿನ್ನಯ**
**ಆಯವಾಗಲಿ ಎನ್ನ ಆಲಯ**
**ಈ ಯಾವರನು ಯಾಚಿಸದಂತೆ ಪಾಲಿಸು ನಮ್ಮನನವರತ ॥**

"ತಾಯಿ, ನೀನು ನಮ್ಮ ಮೇಲೆ ಒಲಿದು ನೆಲೆಸಿದಲ್ಲಿ ಎಲ್ಲ ದುಃಖಗಳೂ ದೂರವಾಗುತ್ತವೆ. ನನ್ನ ದೇಹದಲ್ಲಿ, ಇಂದ್ರಿಯಗಳಲ್ಲಿ, ಹೆಂಡತಿಯಲ್ಲಿ ಮಕ್ಕಳಲ್ಲಿ ನೀನು ಸತತವಾಗಿ ಸನ್ನಿಧಾನವನ್ನು ತುಂಬು. ಓ ರಾಜರಾಮನ ಮಡದಿಯೆ, ನನ್ನ ಮನೆ ನಿನ್ನ ಮನೆಯಾಗಲಿ. ಎಂದಿಗೂ ಕ್ಷುದ್ರಜನರನ್ನು ಯಾಚಿಸದಂತೆ ನಮ್ಮನ್ನು ರಕ್ಷಿಸು."

ವಿಶ್ವನಂದಿನಿಯ ಎಲ್ಲ ಬಾಂಧವರಿಗೂ ವರಮಹಾಲಕ್ಷ್ಮೀಹಬ್ಬದ ಶುಭಾಶಯಗಳು. ನಿಮ್ಮ ಮನೆಯಲ್ಲಿ ಸಾತ್ವಿಕ ಸಂಪತ್ತು ನೆಮ್ಮದಿ ತುಂಬಿರಲಿ. ಸದಾ ಭಗವತ್ಸ್ಮರಣೆಯ ಸೌಭಾಗ್ಯ ನಿಮಗರಲಿ ಎಂಬ ಹಾರೈಕೆಯೊಂದಿಗೆ

— ವಿಷ್ಣುದಾಸ ನಾಗೇಂದ್ರಾಚಾರ್ಯ

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

**ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.**

**ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.**

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **NEW IFSC** **SBIN0040076**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, "Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India
nagendracharya@yahoo.co.in
WhatsApp:  9901 551 491